ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 : ಮೇ 14, 2020**

# ಪತ್ರಿಕಾ ಪ್ರಕಟಣೆ

## ಫೋನ್–ಇನ್ ಕಾರ್ಯಕ್ರಮ

ಬೆಂಗಳೂರು, ಮೇ 14 ( ಕರ್ನಾಟಕ ವಾರ್ತೆ ) :

ಬೆಂಗಳೂರು ಜಲಮಂಡಳಿಯು ದಿನಾಂಕ:**16.05.2020** ರಂದು ಶನಿವಾರದಂದು ಬೆಳಗ್ಗೆ 09:00 ರಿಂದ 10:30 ರವರೆಗೆ ತುಷಾರ್ ಗಿರಿನಾಥ್, ಅಧ್ಯಕ್ಷರು, ಬೆಂಗಳೂರು ಜಲಮಂಡಳ ಇವರೊಂದಿಗೆ ನೇರ ಫೋನ್–ಇನ್ ಕಾರ್ಯಕ್ರಮವನ್ನು ಆಯೋಜಿಸಿದೆ. ಸಾರ್ವಜನಿಕರು ತಮ್ಮ ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು–ಕೊರತೆಗಳನ್ನು ಬಗೆಹರಿಸಿಕೊಳ್ಳಲು ಈ ಫೋನ್–ಇನ್ ಕಾರ್ಯಕ್ರಮವನ್ನು ಸದುಪಯೋಗ ಪಡಿಸಿಕೊಳ್ಳಲು ಕೋರಲಾಗಿದೆ. ಸಾರ್ವಜನಿಕರು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ; **080-22945119.** ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆಯನ್ನು ತಿಳಿಸಿ ದೂರನ್ನು ನೀಡಲು ಕೋರಲಾಗಿದೆ.

## Phone-in program

**Bengaluru, May 14 (Karnataka Information)**

**BWSSB is conducting a Phone-in program with Tushar Girinath, Chairman, BWSSB on 16.05.2020 Saturday from 09:00 am to 10:30 am. So we are here by requesting the public to discuss and redressal the grievances concerned with the Water Billing, Manhole Overflowing, Meter Reading issues, Improper Water Supply and Sanitary issues. Public can contact through the**

**phone number:080-22945119. It is requested to Consumers to give the R.R. Number details before raising complaint.**

## ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ದೂರ ಶಿಕ್ಷಣ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ.

**ಬೆಂಗಳೂರು, ಮೇ 14 ( ಕರ್ನಾಟಕ ವಾರ್ತೆ ) :**

**ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು 2020–21ನೇ ಶೈಕ್ಷಣಿಕ ಸಾಲಿನಲ್ಲಿ ದೂರ ಶಿಕ್ಷಣದ ಮೂಲಕ ಕನ್ನಡ ಮಾಧ್ಯಮದಲ್ಲಿ ಡಿಪ್ಲೊಮೊ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ 16ನೇ ಮೇ, 2020 ಆಗಿರುತ್ತದೆ. ಕೋವಿಡ್–19 ಸಮಯದಲ್ಲಿ ರೈತರಿಗೆ ಅನಾನುಕೂಲವಾಗಿರುವುದರಿಂದ ಆಸಕ್ತ ರೈತರ ಮನವಿಯ ಮೇರೆಗೆ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕವನ್ನು ಜೂನ್ 13, 2020ರವರೆಗೆ ವಿಸ್ತರಿಸಲಾಗಿದೆ. ಆಸಕ್ತ ಕೃಷಿಕರು ಅರ್ಜಿಗಳನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಕೃಷಿ ವಿಜ್ಞಾನ ಕೇಂದ್ರಗಳು ಅಥವಾ ವಿಸ್ತರಣಾ ನಿರ್ದೇಶನಾಲಯ, ಜಿಕೆವಿಕೆ, ಬೆಂಗಳೂರು, ಇವರಿಂದ ಪಡೆಯಬಹುದು ಅಥವಾ ವೆಬ್‌ಸೈಟ್ (*www.uasbangalore.edu.in*) ನಿಂದ ಪಡೆಯಬಹುದು. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ: 080–23330149 ಗೆ ಸಂಪರ್ಕಿಸಬಹುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಪ್ರಧಾನ ಕಾರ್ಯದರ್ಶಿ ಭೇಟಿ

**ಬೆಂಗಳೂರು, ಮೇ 14 ( ಕರ್ನಾಟಕ ವಾರ್ತೆ ) :**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಎಂ. ಮಹೇಶ್ವರ ರಾವ್ ಅವರು ಕೇಂದ್ರ ಕಚೇರಿಯ ವಾರ್ತಾ ಸೌಧಕ್ಕೆ ಭೇಟಿ ನೀಡಿ ಇಲಾಖಾ ಕಾರ್ಯ ಚಟುವಟಿಕೆಗಳ ಕುರಿತು ಮಾಹಿತಿ ಪಡೆದರು.**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಎಸ್.ಎನ್. ಸಿದ್ದರಾಮಪ್ಪ, ಜಂಟಿ ನಿರ್ದೇಶಕರಾದ ಎ. ಆರ್. ಪ್ರಕಾಶ್, ಹೆಚ್. ಬಿ. ದಿನೇಶ್, ಡಿ. ಪಿ. ಮುರಳೀಧರ್ ಮತ್ತು ಬಸವರಾಜ್ ಎಂ ಕಂಬಿ ಒಳಗೊಂಡಂತೆ ಹಿರಿಯ ಅಧಿಕಾರಿಗಳು ಈ ಸಂದರ್ಭದಲ್ಲಿ ಹಾಜರಿದ್ದರು.

ಛಾಯಾಚಿತ್ರ ಲಗತ್ತಿಸಿದೆ)

## ಮಕ್ಕಳ ಸಹಾಯವಾಣಿ

ಬೆಂಗಳೂರು, ಮೇ 14 ( ಕರ್ನಾಟಕ ವಾರ್ತೆ ) :

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಕೋವಿಡ್ –19 ರ ಅವಧಿಯಲ್ಲಿ ಮಕ್ಕಳ ಉಲ್ಲಂಘನೆಯ ಪ್ರಕರಣಗಳಿಗಾಗಿ ಸಹಾಯವಾಣಿ ಜಾರಿಗೊಳಿಸುತ್ತಿದೆ.

ಮೇ 18 ರಂದು ಈ ಸಹಾಯವಾಣಿ ಚಾಲನೆಗೊಳ್ಳಲಿದೆ. ಬಾಲ್ಯವಿವಾಹ, ಬಾಲಕಾರ್ಮಿಕ ಮಕ್ಕಳ ಮೇಲೆ ನಡೆಯುವ ಅತ್ಯಾಚಾರ/ಲೈಂಗಿಕ ಕಿರುಕುಳ/ಶೋಷಣೆ, ಮಕ್ಕಳ ಸಾಗಾಟಣೆ/ಮಕ್ಕಳ ಮಾರಾಟ/ ಮಕ್ಕಳು ಕಾಣೆಯಾಗುವುದು ಮತ್ತು ಶಾಲೆಗಳಿಗೆ ಸಂಬಂಧಿಸಿದ ದೂರುಗಳಿಗಾಗಿ ಬೆಳಿಗ್ಗೆ 10 ರಿಂದ 5–00 ಗಂಟೆಯವರೆಗೆ 080–47181177 ಸಹಾಯವಾಣಿ ಸಂಪರ್ಕಿಸಿ ದೂರು ದಾಖಲಿಸಲು ಅಧಿಕೃತ ಪ್ರಕಟಣೆ ತಿಳಿಸಿದೆ.

# Child Rights is launching a helpline

**Bengaluru, May 14 (Karnataka Information)**

**The Karnataka State Commission for the Protection of Child Rights is launching a helpline during this period of the Covid-19 lockdown in order to curb the violations of child rights.**

**The helpline will be released on May 18, the public can access the helpline number 080-47181177 between 10.00 a.m. to 5.00 p.m. to report complaints against issues related to school, child marriage, missing children, child labour, sexual offences and any other forms of harassment against children says official press release.**

## ಸಚಿವರ ಪ್ರವಾಸ

**ಬೆಂಗಳೂರು, ಮೇ 14 ( ಕರ್ನಾಟಕ ವಾರ್ತೆ ) :**

**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಅವರು ಮೇ 15 ರಂದು ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಅಂದೇ ರಾತ್ರಿ ಕೇಂದ್ರಸ್ಥಾನಕ್ಕೆ ಹಿಂತಿರುಗುವರು.**